ಅಸಲು ದಾವಾ ಸಂಖ್ಯೆಃ 882/2018 ಪಿಡಬ್ಲ್ಯೂ -1

**<u>2 ನೇ ಅಪರ ಸಿವಿಲ್ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>**

ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ:19.01.2026.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಜೆ.ಎನ್. ವಕೀಲರಿಂದ</u>**

ವಾದ ಪತ್ರ ಮತ್ತು ಪ್ರಮಾಣ ಪತ್ರಗಳನ್ನು ನಾನು ಹೇಳಿ ಬರೆಸಿರುತ್ತೇನೆ. ನನಗೆ ಕನ್ನಡ ಮತ್ತು ತೆಲಗು ಭಾಷೆ ಬರುತ್ತದೆ. ನನ್ನ ತಂದೆಯ ಪರವಾಗಿ ನಾನು ಯಾವಾಗ ಜಿಪಿಎ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಹುಟ್ಟಿದ ದಿನಾಂಕ ನನಗೆ ನೆನಪಿಲ್ಲ. ನನಗೆ 2004 ನೇ ಸಾಲಿನಲ್ಲಿ 23-24 ವರ್ಷಗಳಾಗಿರಬಹುದು. ನನ್ನ ತಂದೆಗೆ ವಿಭಾಗದ ಮೂಲಕ ಸರ್ವೆ ನಂಬರ 291, 293/3, 294/4, 296 ರಲ್ಲಿ ವಿಭಾಗವಾಗಿರುತ್ತದೆ. ಈಗಲೂ ಸಹ ಸದರಿ ಸ್ವತ್ತುಗಳು ಹಾಗೆ ಇದೆ. ಬೆಗೂರು 2009 ರಲ್ಲಿ ಬಿಬಿಎಮಪಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ನಿಪಿ.1 ರಲ್ಲಿನ ನಕ್ಷೆಯನ್ನು ತೋರಿಸಲಾಗಿ ಅದರಲ್ಲಿರುವ ಸರ್ವೆ ನಂಬರ 289/2 ರ ಸ್ವತ್ತು ಈಗಾಗಲೇ ಮಾರಾಟವಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಸರ್ವೆ ನಂಬರ ನಮ್ಮ ಸ್ವತ್ತು ಅಲ್ಲ ಎಂದು ನುಡಿಯುತ್ತಾರೆ.

2. ನಿಡಿ.2 ರ ದಾಖಲೆಯಲ್ಲಿ ನನ್ನ ಸಹಿ ಮತ್ತು ಭಾವಚಿತ್ರ ಇದೆ. ಸದರಿ ಸರ್ವೆ ನಂಬರ 293/2 ರಲ್ಲಿ ನಿವೇಶನ ಸಂಖ್ಯೆ 3 ಮತ್ತು 4 ನ್ನು ಶಾಂತಾ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಡಿವಾಳ ಶಾಂತಮ್ಮ ಎಂಬುವವರಿಗೆ ಮಾರಾಟ ಮಾಡಿರುತ್ತೇವೆ ಆದರೆ 1 ನೇ ಪ್ರತಿವಾದಿಗೆ ಅಲ್ಲ ಎಂದು ನುಡಿಯುತ್ತಾರೆ. 2003-04 ರಲ್ಲಿ ನಮ್ಮ ತಂದೆಯವರು ದಾವಾ ಸ್ವತ್ತಿನ ನಿವೇಶನಗಳನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಿಡಿ.1 ಸ್ವತ್ತನ್ನು ನಾವು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸುವ ಸಮಯದಲ್ಲಿ ನನ್ನ ವಯಸ್ಸು ನನಗೆ ಗೊತ್ತಿಲ್ಲ. ನನ್ನ ಮನೆಗು ಮತ್ತು 1 ನೇ ಪ್ರತಿವಾದಿಯ ಮನೆಗೂ 4 ಕೀ. ಮೀ. ದೂರವಿದೆ. ದಾವಾ ಸ್ವತ್ತು ನನ್ನ ಹೆಸರಿನಲ್ಲಿ ಇರುವ ಬಗ್ಗೆ ನಾನು ದಾಖಲೆಗಳ್ನು ಹಾಜರುಪಡಿಸಿರುತ್ತೇನೆ. ನಾನು ನಿಡಿ.2 ಕ್ಕೆ ಸಹಿ ಮಾಡಿರುವಂತೆ ಖಾತಾದಾರರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

3. 2004 ರಲ್ಲಿ ನಮ್ಮ ತಂದೆ ನನ್ನ ದೊಡ್ಡಪ್ಪನ ಮಗನಾದ ಸಂಪಂಗಿರವರಿಗೆ ದಾನಪತ್ರವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ದಾನಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನ ಹೆಸರು ಯಂಗಪ್ಪ. ಜಯಮ್ಮ ನನ್ನ ದೊಡ್ಡಮ್ಮ. ದಿನಾಂಕಃ 17.07.2004 ರಲ್ಲಿ ನನ್ನ ತಂದೆಯವರು ಜಯಮ್ಮ ರವರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ. 6 ರಿಂದ 10 ರಲ್ಲಿ ಕಾಣುತ್ತಿರುವ ಕಟ್ಟಡ ಪ್ರತಿವಾದಿಯವರು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವ್ಯವಸಾಯದ ಸ್ವತ್ತು ಎಂದು ಹೇಳಲು ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು 2003-04 ನೇ ಸಾಲಿನಲ್ಲಿ ಸೈಟಗಳನ್ನಾಗಿ ವಿಂಗಡಿಸಿ ಕ್ರಯ ಮತ್ತು ದಾನಪತ್ರ ಮಾಡಿರುವ ವಿಚಾರ ನನಗೆ ಗೊತ್ತಿದ್ದರು ಸಹ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲೆಗಳ ವಿರುದ್ಧ ಈ ವರಗೆ ಯಾವುದೆ ತಕರಾರನ್ನು ಮಾಡಿರುವುದಿಲ್ಲ ಸರಿಯಲ್ಲ. ದಾವಾ ಸ್ವತ್ತು ಬಿಬಿಎಮಪಿ ವ್ಯಾಪ್ತಿಗೆ ಬರುತ್ತದೆ. ನನಗೆ ಎಲ್ಲಾ ಗೊತ್ತಿದ್ದರು ಸಹ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೆ ಹಕ್ಕು ಮತ್ತು ಸ್ವಾಧೀನದಲ್ಲಿ ಇಲ್ಲದಿದ್ದರು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2003 ರಲ್ಲಿ ಮಡಿವಾಳ ಶಾಂತಾ ರವರು ಬಂದು ನೊಂದಣಿ ಮಾಡಿಸಿಕೊಂಡಿರುತ್ತಾರೆ ಆದರೆ 1 ನೇ ಪ್ರತಿವಾದಿ ಏಕೆ ಬಂದಿರುವುದಿಲ್ಲ ಎಂದು ಪ್ರಶ್ನೆ ಮಾಡಿರುತ್ತಾರೆ.

**<u>ಮರುವಿಚಾರಣೆಃ</u> ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಹೇಳಿಕೆಯ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸಹಿ ಮಾಡಿದ್ದಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.